ಜನರು ಮಾತನಾಡಿಕೊಳ್ಳುವ ಮೊದಲೇ ತಾನು ಕಾರ್ಯಗತಗೊಳಿಸಬೇಕು. ತಾನು ಅಡುಗೆಯವಳ ಆ ಕೊಕ್ಕರೆ ಕುತ್ತಿಗೆಯನ್ನು ಎರಡೂ ಕೈಗಳಿಂದ ಬಿಗಿಯಾಗಿ ಹಿಸುಕುತ್ತಿರುವ ದೃಶ್ಯ ಅವನ ಮುಂದೆ ಕಾಣಿಸತೊಡಗಿತು. ಛೆ, ಛೆ... ಕೈಗಳಿಂದಲ್ಲ. ಆ ಕುತ್ತಿಗೆ ಹಗ್ಗದ ಕುಣಿಕೆಗೆ ಲಾಯಕ್ಕಾಗಬೇಕು... ಅವನ ಯೋಜನೆಯಲ್ಲಿ ಒಂದು ಸಣ್ಣ ತಿದ್ದುಪಡಿಯಾಯಿತು.

★★★

ಹೊರಗೆ ಸ್ನೇಹಿತರ ಜೊತೆಯಲ್ಲಿ ಸ್ಪೆನ್ಸರ್ ಖುಶ್‌ಖುಶಿಯಾಗಿ ಇರುತ್ತಿದ್ದನಾದರೂ ಮನೆಯೊಳಗೆ ಕಾಲಿಡುತ್ತಿದ್ದಂತೆ ಮೌನಿಯಾಗಿಬಿಡುತ್ತಿದ್ದ. ಮಿಲ್ಲಿಯನ್ನು ಕೆಲಸದಿಂದ ತೆಗೆದು ಹಾಕಲಾಗಿತ್ತು. ಹನ್ನಾಳ ಕೆಲಸದಲ್ಲಿ ಬೇಜವಾಬ್ದಾರಿ, ಅಸಡ್ಡೆ ಎದ್ದು ಕಾಣುತ್ತಿತ್ತಾದರೂ ಸ್ಪೆನ್ಸರ್ ನೋಡಿದರೂ ನೋಡದವನಂತೆ ಸುಮ್ಮನಿದ್ದುಬಿಟ್ಟ. ಅವಳಿಗೆ ಲಭಿಸುತ್ತಿದ್ದ ಗೌರವಕ್ಕಾಗಿ ಹನ್ನಾ ವ್ಯಂಗ್ಯ ನಗೆ ಬೀರುತ್ತಿದ್ದಳು. ಪ್ರತಿಯಾಗಿ ಅವನೂ ಮುಗುಳ್ನಗುತ್ತಿದ್ದ. ಅವನ ನಗು ಯಾಕೋ ಅವಳನ್ನು ಕಂಗೆಡಿಸುತ್ತಿತ್ತು.

"ನಿಮಗೆ ನಾನು ಎಳ್ಳಷ್ಟೂ ಹೆದರುವುದಿಲ್ಲ!" ಒಂದು ದಿನ ಯಾವುದೇ ಪ್ರಚೋದನೆಯಿಲ್ಲದೆ ಹನ್ನಾ ಅವಡುಗಚ್ಚಿ ಅವನಿಗೆ ಹೇಳಿದಳು.

"ಸರಿ, ಹನ್ನಾ!" ಚಕಿತಗೊಂಡ ಸ್ಪೆನ್ಸರ್ ಉದ್ಗರಿಸಿದ.

"ನನಗೆ ಏನಾದರೂ ಆದರೆ..."

"ನಿನ್ನಂತ ಜಾಗರೂಕ ಹೆಂಗಸಿಗೆ ಏನಾಗಲು ಸಾಧ್ಯ, ಹನ್ನಾ? ನೀನು ಖಂಡಿತಾ ತೊಂಬತ್ತು ವರ್ಷ ಬದುಕುತ್ತೀಯಾ!"

ಅವನು ನಿದ್ರಾಹೀನತೆಯಿಂದ ಚಡಪಡಿಸತೊಡಗಿದ. ಸ್ವಲ್ಪ ಹೊತ್ತು ನಿದ್ರಿಸಿದರೂ ಏನೆಲ್ಲಾ ಕೆಟ್ಟ ಕನಸುಗಳು ಬಿದ್ದು ಬೆವರುತ್ತಾ ಏಳುತ್ತಿದ್ದ. ಹನ್ನಾ, ಎಲ್ಲಿ ತನ್ನ ಕಣ್ಣೊಳಗಿನ ದುಷ್ಟ ಭಾವನೆಗಳನ್ನು ಅರ್ಥಮಾಡಿಕೊಂಡುಬಿಡುತ್ತಾಳೋ ಎಂಬ ಭಯದಿಂದ ಅವಳಿಗೆ ಕಣ್ಣುಕೊಟ್ಟು ಮಾತನಾಡುವ ಸಂದರ್ಭಗಳನ್ನು ತಪ್ಪಿಸಿಕೊಳ್ಳುತ್ತಿದ್ದ.

ಯೋಚಿಸಿ ಯೋಚಿಸಿ ಕೊನೆಗೂ ಅವನೊಂದು ಯೋಜನೆಯನ್ನು ತಯಾರಿಸಿದ. ಒಂದು ವೇಳೆ ಯೋಜನೆ ಕೈಕೊಟ್ಟು ವಿಫಲವಾದರೂ ತನ್ನ ಮೇಲೆ ಎಳ್ಳಷ್ಟೂ ಸಂಶಯಬಾರದಂತೆ ಹಾಗೂ ಹನ್ನಾ ಸಿಕ್ಕಿಬಿದ್ದು ನೇಣಿಗೇರುವ ಯೋಜನೆ! ಈ ಯೋಜನೆಗೆ ಅವನು ಚಾಲನೆ ಕೊಡುವುದಷ್ಟೇ ಅವನ ಪಾತ್ರ. ಉಳಿದವರು ಅದು ತನ್ನಷ್ಟಕ್ಕೇ ಮುಂದುವರಿಯುವಂತೆ ನೋಡಿಕೊಳ್ಳುತ್ತಾರೆ.

ಅಂದು ಸಂಜೆ ವಾಕಿಂಗ್ ಮುಗಿಸಿ ಸ್ಪೆನ್ಸರ್ ಮನೆಗೆ ಬಂದಾಗ ತುಂಬಾ ದಣಿದಿದ್ದ. ಚಹಾ ಕೂಡ ಅರ್ಧಕ್ಕೇ ಬಿಟ್ಟು ಎದ್ದ. ರಾತ್ರಿ ಊಟ ಕೂಡ ಅಷ್ಟೇ. ಅರ್ಧಕ್ಕೆ ಬಿಟ್ಟು ಎದ್ದು ತಲೆಯನ್ನು ಬೊಗಸೆಯಲ್ಲಿ ಹಿಡಿದುಕೊಂಡು ಬೆಂಕಿಗೂಡಿನ ಮುಂದೆ ಮುದುಡಿ ಕುಳಿತುಕೊಂಡ. ಯಾಕೋ ಚಳಿ ಚಳಿ ಎನಿಸುತ್ತಿದೆ ಎಂದು ಅಡುಗೆಯವಳಿಗೆ ತಿಳಿಸಿದ.

ಮರುದಿನವೂ ಅವನ ಆರೋಗ್ಯ ಸರಿಯಾದಂತೆ ಕಾಣಿಸಲಿಲ್ಲ. ಮಧ್ಯಾಹ್ನದ ನಂತರ ಡಾಕ್ಟರರಿಗೆ ಹೇಳಿ ಕಳಿಸಿದ. ಅಜೀರ್ಣವಾಗಿದೆ ಎಂದು ಹೇಳಿ ಡಾಕ್ಟರರು ಕೆಲವು ಮಾತ್ರೆ ಮತ್ತು ಸಿರಪನ್ನು ಬರೆದುಕೊಟ್ಟರು. ಮೂರು ದಿನ ಕಳೆದರೂ ಏನೂ ಸುಧಾರಣೆಯಾಗದೆ ಸ್ಪೆನ್ಸರ್ ಹಾಸಿಗೆ ಹಿಡಿದ.

"ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವುದು ಒಳ್ಳೆಯದೇ ಬಿಡಿ." ಎಂದ ಡಾಕ್ಟರ್, "ಎಲ್ಲಿ ನಾಲಿಗೆಯನ್ನೊಮ್ಮೆ ತೋರಿಸಿ." ಎಂದರು.

"ನನಗೆ ಏನಾಗುತ್ತಿದೆ ಡಾಕ್ಟರ್ ರೋಬರ್ಟ್ಸ್?" ಅವನು ಆತಂಕದಿಂದ ಕೇಳಿದ.

"ಆತಂಕಪಡುವುದಂತದೇನಿಲ್ಲ ಮಿ. ಸ್ಪೆನ್ಸರ್. ಅಜೀರ್ಣದ ಸಮಸ್ಯೆಯ ಜೊತೆಗೆ ಗಾಬರಿ, ಆತಂಕ